# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 732 |
| ಸದಸ್ಯರ ಹೆಸರು | ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 22.02.2023 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಂದಾಯ ಇಲಾಖೆಯಲ್ಲಿನ ರೈತರ ಸರ್ವೆ ಹಾಗೂ ಪೋಡಿ ಕಾರ್ಯಗಳನ್ನು ಮಾಡಿಸಲು ನಿಗಧಿಪಡಿಸಿರುವ ಹಣವನ್ನು ಪಾವತಿಸಿದರೂ ಭೂಮಾಪನ ಇಲಾಖೆಯ ಅಧಿಕಾರಿಗಳು ಸರ್ವೆ ಹಾಗೂ ಪೋಡಿ ಕಾರ್ಯಗಳನ್ನು ಪೂರ್ಣಗೊಳಿಸದೆ ವಿನಾಕಾರಣ ವಿಲೇ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿ ರೈತರು ಪೋಡಿ ಹಾಗೂ ವಿವಿಧ ರೀತಿಯ ಅಳತೆ ಕಾರ್ಯಕ್ಕೆ ನಿಗದಿಪಡಿಸಿದ ಶುಲ್ಕವನ್ನು ಸಂಬಂಧಿಸಿದ ಹೋಬಳಿ ಮಟ್ಟದ ಅಟಲ್‌ಜೀ ಜನಸ್ನೇಹಿ ಕೇಂದ್ರದಲ್ಲಿ ಪಾವತಿಸಿದ ನಂತರ ಸದರಿ ಅರ್ಜಿಯನ್ನು ಮೋಜಿಣಿ ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ಸ್ವೀಕರಿಸಿ ಅಳತೆಗಾಗಿ ಭೂಮಾಪಕರಿಗೆ ಹಂಚಿಕೆ ಮಾಡಲಾಗುತ್ತದೆ. ಭೂಮಾಪಕರು ಅಳತೆಗೆ 7 ದಿವಸ ಮುಂಚಿತವಾಗಿ ಸಂಬಂಧಿಸಿದ ಎಲ್ಲಾ ಹಕ್ಕುದಾರರು ಹಾಗೂ ಆರ್.ಟಿ.ಸಿ.ದಾರರಿಗೆ ನೋಟೀಸು ನೀಡಿ ನಿಗದಿತ ದಿನಾಂಕದಂದು ಸ್ಥಳಕ್ಕೆ ಹೋಗಿ ಹಾಜರಿದ್ದ ಅರ್ಜಿದಾರರು/ಆರ್.ಟಿ.ಸಿ.ದಾರರ ಸಮಕ್ಷಮ ಅಳತೆ ಮಾಡುತ್ತಾರೆ. ಒಂದು ವೇಳೆ ಅರ್ಜಿದಾರರು/ ಆರ್.ಟಿ.ಸಿ.ದಾರರು ಆ ದಿನ ಗೈರು ಹಾಜರಾಗಿದ್ದಲ್ಲಿ ಸ್ಥಳದಲ್ಲಿ ದೊರೆಯಬಹುದಾದ ಮಾಹಿತಿಯಂತೆ ಅಳತೆ ಕೆಲಸ ನಿರ್ವಹಿಸಿ ಕಡತವನ್ನು ಕಛೇರಿಗೆ ಹಿಂತಿರುಗಿಸಬೇಕಾಗಿರುತ್ತದೆ.<br><br>ಅಳತೆ ವೇಳೆ ಹಕ್ಕುದಾರರ ಅನುಭವದಲ್ಲಿ ವ್ಯತ್ಯಾಸವಿದ್ದಲ್ಲಿ, ಹಕ್ಕು ಮತ್ತು ಗಡಿ ವಿಚಾರದಲ್ಲಿ ನ್ಯಾಯಾಲಯದಲ್ಲಿ ದಾವಾಗಳಿದ್ದಲ್ಲಿ, ಹಕ್ಕುದಾರರ ಹಕ್ಕು ಮತ್ತು ಗಡಿ ಕುರಿತು ಒಮ್ಮತವಿಲ್ಲದಿದ್ದಲ್ಲಿ, ಹಕ್ಕುದಾರರು ಬೇರೆ ರೀಸನಂ/ಹಿಸ್ಸಾ ನಂಬರ್ ನಲ್ಲಿ ಅನುಭವವಿದ್ದಲ್ಲಿ, ಪೈಕಿ ಹಕ್ಕುದಾರರ ಮರಣ ಹೊಂದಿದ್ದಲ್ಲಿ, ಹಕ್ಕುದಾರರ ಬದಲಾವಣೆಯಾಗಿದ್ದಲ್ಲಿ, ಅಳತೆ ವೇಳೆ ಅರ್ಜಿದಾರರು ವೈಯಕ್ತಿಕ ಕಾರಣದಿಂದ ಅಳತೆ ಬೇಡವೆಂದು ಹೇಳಿಕೆ ನೀಡಿದಲ್ಲಿ ಅಂತಹ ಅರ್ಜಿಯನ್ನು ಭೂಮಾಪಕರು ವಿಲೇ ಮಾಡುತ್ತಿರುತ್ತಾರೆ.<br><br>ಆದಾಗ್ಯೂ ಅಳತೆಗೆ ಸಂಬಂಧಿಸಿದಂತೆ ವಿನಾಕಾರಣ ವಿಲೇ ಮಾಡಿದ ಬಗ್ಗೆ ನಿರ್ದಿಷ್ಟ ದೂರುಗಳು ಬಂದಲ್ಲಿ ಅಂತಹ ನೌಕರರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. |

| | | |
|---|---|---|
| ಆ) | ಬಂದಿದ್ದಲ್ಲಿ, ಕಂದಾಯ ಇಲಾಖೆಯಲ್ಲಿನ ಸರ್ವೆ ಹಾಗೂ ಪೋಡಿ ಕೆಲಸಗಳನ್ನು ನಿರ್ವಹಿಸಲು ನೇಮಿಸಿರುವ ಅಧಿಕಾರಿಗಳು ವಿನಾ ಕಾರಣ ರೈತರ ಕೆಲಸಗಳನ್ನು ಪೂರ್ಣಗೊಳಿಸದೆ ಇಲ್ಲಸಲ್ಲದ ಕಾರಣಗಳನ್ನು ನೀಡುತ್ತಿರುವುದರಿಂದ ಇವುಗಳಿಂದ ವಿನಾಯಿತಿ ನೀಡಿ ರೈತರ ಸರ್ವೆ ಕೆಲಸಗಳು ಸುಗಮವಾಗಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಸರ್ವೆ ಮ್ಯಾನ್ಯುಯಲ್ ಮತ್ತು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ (30) ರನ್ವಯ ನೋಟೀಸು ಜಾರಿ ಮಾಡಿ ಒಬ್ಬ ರೈತರ ಒಪ್ಪಿಗೆಯಿಲ್ಲದಿದ್ದರೂ ಸಹ ವಾಸ್ತವಾಂಶ ಮತ್ತು ದಾಖಲೆಯನ್ವಯ ಜಾರಿಯಲ್ಲಿರುವ ನಿಯಮಗಳನ್ನು ಪಾಲಿಸಿ ಅಳತೆ ಕಾರ್ಯ ನಿರ್ವಹಿಸಿ ವರದಿ ನೀಡುವಂತೆ ಅಗತ್ಯ ಸೂಚನೆಗಳನ್ನು ನೀಡಲಾಗಿದೆ.<br>ಪ್ರಸ್ತುತ ತಂತ್ರಾಂಶದ ಮೂಲಕ ಸ್ವೀಕೃತವಾದ ಅರ್ಜಿ ದಿನಾಂಕದ ಜೇಷ್ಠತೆ ಆಧಾರದ ಮೇಲೆ ಕಡತಗಳನ್ನು ಭೂಮಾಪಕರಿಗೆ ಸ್ವಯಂ ಚಾಲಿತವಾಗಿ ಹಂಚಿಕೆ ಮಾಡಲಾಗುತ್ತಿದ್ದು, ಸದರಿಯವರು ಹಂಚಿಕೆಯಾದ ದಿನಾಂಕದಿಂದ 30 ದಿನಗಳೊಳಗಾಗಿ ಅಳತೆ ಕೆಲಸ ನಿರ್ವಹಿಸಿ ಕಛೇರಿಗೆ ಹಿಂತಿರುಗಿಸಬೇಕಾಗಿರುತ್ತದೆ. ಭೂಮಾಪನ ಇಲಾಖೆಯ ಸುತ್ತೋಲೆ ಸಂಖ್ಯೆ SSLR-11030/03/2019 ದಿನಾಂಕ 19-08-2019 ರಂತೆ ನೋಟೀಸ್‌ನಲ್ಲಿ ನಮೂದಿಸಿದ ದಿವಸವೇ ಅಳತೆ ಕೆಲಸ ಪೂರ್ಣಗೊಳಿಸಬೇಕಾಗಿರುತ್ತದೆ. ಆದ್ದರಿಂದ ಅರ್ಜಿದಾರರು ನಿಗದಿತ ಅಳತೆ ದಿನಾಂಕದಂದು ತಪ್ಪದೇ ಹಾಜರಾಗಿ ಅಳತೆಗೆ ಸಹಕರಿಸಬೇಕಾಗಿರುತ್ತದೆ.<br>ಅಳತೆ ಕಾರ್ಯ ಸುಗಮವಾಗಿ ಸಾಗಲು ಅರ್ಜಿಗಳನ್ನು ತಂತ್ರಾಂಶದ ಮೂಲಕ ಸರದಿ ಸಾಲಿನಂತೆ ಜೇಷ್ಠತೆಯ ಆಧಾರದ ಮೇರೆಗೆ ಹಂಚಿಕೆ ಮಾಡಲಾಗುತ್ತಿದೆ.<br>ಈ ಹಿಂದೆ ಕೆಲವು ರೀತಿಯ ಅಳತೆ ಕಾರ್ಯವನ್ನು ಸರ್ಕಾರಿ ಭೂಮಾಪಕರು ಮತ್ತು ಕೆಲವೊಂದು ರೀತಿಯ ಅಳತೆ ಕಾರ್ಯವನ್ನು ಪರವಾನಗಿ ಭೂಮಾಪಕರು ಮಾತ್ರ ನಿರ್ವಹಿಸುತ್ತಿದ್ದು ಇದರಿಂದ ಹೆಚ್ಚಿನ ವಿಲೇವಾರಿ ಸಾಧ್ಯವಾಗುತ್ತಿರಲಿಲ್ಲ. ರೈತರಿಗೆ ಶೀಘ್ರವಾಗಿ ಪರಿಹಾರ ನೀಡುವ ಉದ್ದೇಶದಿಂದ ಸರ್ಕಾರದ ಆದೇಶದ ಸಂಖ್ಯೆ ಕಂ.ಇ.130. ಎಸ್.ಎಸ್.ಸಿ.2021 ದಿನಾಂಕ: 11-02-2022 ರಲ್ಲಿ ಸರ್ಕಾರಿ ಜಮೀನು ಮತ್ತು ಇತರೆ ಅಳತೆ ಪ್ರಕರಣಗಳನ್ನು ಮಾತ್ರ ಸರ್ಕಾರಿ ಭೂಮಾಪಕರು ಅಳತೆ ಕಾರ್ಯ ನಿರ್ವಹಿಸಲು ಉಳಿದಂತೆ ಎಲ್ಲಾ ಅಳತೆ ಪ್ರಕರಣಗಳನ್ನು ಸರ್ಕಾರಿ ಮತ್ತು ಪರವಾನಗಿ ಭೂಮಾಪಕರುಗಳಿಗೆ ಹಂಚಿಕೆ ಮಾಡಲಾಗುತ್ತಿದ್ದು, ಇದರಿಂದಾಗಿ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಸಾಧ್ಯವಾಗುತ್ತಿದೆ. |

**ಸಂಖ್ಯೆ: ಕಂಇ 53 ಎಸ್‌ಎಸ್‌ಸಿ 2023**

**(ಆರ್.ಅಶೋಕ)**
ಕಂದಾಯ ಸಚಿವರು